ಅವರು ವೃತ್ತಿಜೀವನದಲ್ಲಿ ಯಶಸ್ಸಿನ ಹಾದಿಯಲ್ಲಿರುವ ದಂಪತಿ. ಅವರ ವೃತ್ತಿಪರತೆ, ಕಾರ್ಯದಕ್ಷತೆ ಎಲ್ಲವೂ ಅವರ ಸಹೋದ್ಯೋಗಿಗಳಲ್ಲಿ ಅಸೂಯೆಯನ್ನೂ, ಮೇಲಧಿಕಾರಿಗಳಲ್ಲಿ ಮೆಚ್ಚುಗೆಯನ್ನೂ ಹುಟ್ಟಿಸುತ್ತವೆ. 'ಸ್ವರ್ಗಕ್ಕೆ ಕಿಚ್ಚು ಹಚ್ಚು'ವಷ್ಟು ಅನ್ಯೋನ್ಯವಾಗಿದ್ದ ಅವರನ್ನು ಇತ್ತೀಚೆಗೆ ಒಂದು ಕೊರಗು ಕಾಡತೊಡಗಿದೆ. ಮೂವತ್ತೈದು ದಾಟುತ್ತಿರುವ ಅವರಿಗೆ ಇನ್ನೂ ಮಕ್ಕಳಾಗಿಲ್ಲ. ಮದುವೆಯಾದ ಆರಂಭದಲ್ಲಿ ತುಸು ತಡೆದು ಮಾಡಿಕೊಂಡರಾಯ್ತು ಎಂದು ಮುಂದೂಡತ್ತಲೇ ಬಂದಿದ್ದಾರೆ. ಆದರೆ ಇನ್ನೂ ತಡಮಾಡಿದರೆ ವಯೋಸಹಜ ತೊಂದರೆಗಳಿಂದ ಹೆರಿಗೆಯಲ್ಲಿ ಕಷ್ಟವಾಗಬಹುದು ಎಂದು ವೈದ್ಯರು ಹೇಳಿದ್ದಾರೆ. ಆದರೆ ಗರ್ಭಿಣಿಯಾಗಿ, ಮಗುವನ್ನು ಹೆತ್ತು, ಅದನ್ನು ಕೆಲಕಾಲ ಪೋಷಿಸಲು ಕನಿಷ್ಠ ಎರಡು ವರ್ಷ ಉದ್ಯೋಗದಿಂದ ದೂರವಿರಬೇಕಾಗುತ್ತದೆ. ಹಣಕ್ಕೇನೂ ಸಮಸ್ಯೆ ಇಲ್ಲದಿದ್ದರೂ ಆ ಎರಡು ವರ್ಷ ತನ್ನ ವೃತ್ತಿಜೀವನದ ನಿರ್ಧಾರಕ ಸಮಯ ಎಂದು ಅವಳಿಗೆ ಗೊತ್ತು. ಎರಡು ವರ್ಷದ ಅಂತರ ಕೆಲಸದ ಸ್ಥಳದಲ್ಲಿ ಬಹುದೊಡ್ಡ ಹಿಂಜಿಗಿತವನ್ನುಂಟು ಮಾಡುತ್ತದೆ ಎಂಬ ಭಯ ಅವಳದ್ದು. ಮಗು ಮಾಡಿಕೊಳ್ಳುವುದು ಮುಖ್ಯವೇ ಆದರೂ ಅದರ ಕಾರಣಕ್ಕೆ ವೃತ್ತಿಜೀವನದ ಯಶಸ್ಸಿನ ದಾರಿಯನ್ನು ಬಿಟ್ಟುಕೊಡಲು ಅವಳಿಗೆ ಮನಸ್ಸಿಲ್ಲ. ಆ ಸಂದಿಗ್ಧ ಸಮಯದಲ್ಲಿ ಸ್ನೇಹಿತೆಯೊಬ್ಬಳು ನೀಡಿದ ಸಲಹೆ ಅವಳಿಗೆ ಆಶಾವಾದದ ದೀಪದಂತೆ ಒದಗಿಬಂದಿದೆ. ಅವಳೀಗ ನೆಮ್ಮದಿಯಾಗಿ ಆಫೀಸಿಗೆ ಹೋಗುತ್ತಿದ್ದಾಳೆ. ಅಲ್ಲಿ ತನ್ನ ಯಶೋಯಾತ್ರೆಯನ್ನು ಮುಂದುವರಿಸಿದ್ದಾಳೆ.

***

ಆಕೆಗೆ ಕೆಲವು ದಿನಗಳ ಹಿಂದೆ ಕ್ಯಾನ್ಸರ್ ಇದೆ ಎಂದು ಗೊತ್ತಾಗಿದೆ. ಚಿಕಿತ್ಸೆಯಲ್ಲಿ ಅದನ್ನು ಬಹುತೇಕ ನಿಯಂತ್ರಣಕ್ಕೆ ತರಬಹುದು ಎಂದು ವೈದ್ಯರು ಹೇಳಿದ್ದರಿಂದ ಅವಳು ಎದೆಗುಂದಿಲ್ಲ. ಆದರೆ ಕ್ಯಾನ್ಸರ್‌ಗೆ ನೀಡುವ ಚಿಕಿತ್ಸೆಯಿಂದ ಅಂಡಾಣು ಉತ್ಪಾದನೆ ಗಣನೀಯವಾಗಿ ಕಡಿಮೆಯಾಗಬಹುದು. ಅದರಿಂದ ಮುಂದೆ ಮಕ್ಕಳಾಗುವ ಸಾಧ್ಯತೆ ಕಡಿಮೆ ಎಂಬ ಸಂಗತಿ ಕೇಳಿ ಅವಳು ಕಂಗೆಟ್ಟಿದ್ದಾಳೆ. ಈಗಷ್ಟೇ ಮಗು ಮಾಡಿಕೊಳ್ಳುವ ಆಲೋಚನೆಯಲ್ಲಿದ್ದ ಅವಳಿಗೆ ಕ್ಯಾನ್ಸರ್ ಎನ್ನುವುದು ಬದುಕನ್ನು ಉಳಿಸಿ ಸಂತಾನಶಕ್ತಿಯನ್ನು ಕಿತ್ತುಕೊಳ್ಳುವ ಬೆದರಿಕೆ ಹಾಕುತ್ತಿದೆ. ಇದೇ ನೋವನ್ನು ವೈದ್ಯರಲ್ಲಿ ತೋಡಿಕೊಂಡಾಗ ಅವರು ಹೇಳಿದ ಒಂದು ದಾರಿ ಅವಳ ಮುಖದಲ್ಲಿ ಚಿಂತೆಯ ಗೆರೆಗಳನ್ನು ಅಳಿಸಿಹಾಕಿದೆ. ಕಣ್ಣುಗಳಲ್ಲಿ ನೆಮ್ಮದಿಯ ಛಾಯೆಯನ್ನು ತುಂಬಿದೆ.

***

ಮೇಲಿನ ಎರಡೂ ಉದಾಹರಣೆಗಳಲ್ಲಿ ಮಗು ಪಡೆದುಕೊಳ್ಳುವುದು ಹೇಗೆ ಎಂಬ ಆತಂಕಕ್ಕೆ ಉತ್ತರವಾಗಿ ಒದಗಿಬಂದಿದ್ದು ಒಂದೇ ತಂತ್ರಜ್ಞಾನ.

'ಎಗ್ ಫ್ರೀಜಿಂಗ್!'

ಇದನ್ನು ಕನ್ನಡದಲ್ಲಿ 'ಅಂಡಾಣು ಶೈತ್ಯೀಕರಣ' ಎನ್ನಬಹುದು.

ಜೀವ ಸಂಕುಲವನ್ನು ವೈಜ್ಞಾನಿಕವಾಗಿ ವರ್ಗೀಕರಣ ಮಾಡುವಾಗ ಮಾನವನನ್ನು ಸಸ್ತನಿಗಳು ಎಂದು ಕರೆಯಲಾಗಿದೆ. ಆದರೆ ವಿಜ್ಞಾನ ಬೆಳೆದಂತೆ ವೀರ್ಯಾಣು ಬ್ಯಾಂಕ್, ಅಂಡಾಣು ಬ್ಯಾಂಕ್‌ಗಳನ್ನು ಕೆಲವು ದೇಶದಲ್ಲಿ ಕಾನೂನು ಪ್ರಕಾರವೇ ಸ್ಥಾಪಿಸಲಾಗಿದೆ. ಪ್ರಯೋಗಾಲಯದಲ್ಲಿ ಅಂಡಾಣು ವೀರ್ಯಾಣುವಿನ ಸಮ್ಮಿಲನ ಮಾಡಿ ಭ್ರೂಣವನ್ನು ಗರ್ಭದೊಳಗೆ ಸೇರಿಸುವ 'ಐವಿಎಫ್' (ಪ್ರನಾಳ ಶಿಶು ತಂತ್ರಜ್ಞಾನ) ತಂತ್ರಜ್ಞಾನ ಬಂದು ಈಗಾಗಲೇ ಹಲವು ವರ್ಷಗಳು ಕಳೆದಿವೆ. ಹಾಗಾಗಿ ಮನುಷ್ಯನನ್ನೀಗ 'ಮೊಟ್ಟೆಯಿಡುವ ಸಸ್ತನಿ' ಎಂದು ತಮಾಷೆಗೆ ಕರೆಯಬಹುದು! ಪ್ರನಾಳಶಿಶು ತಂತ್ರಜ್ಞಾನದ ಮುಂದುವರಿದ ರೂಪದಂತಿರುವ ತಂತ್ರಜ್ಞಾನ ಎಗ್ ಫ್ರೀಜಿಂಗ್.

ಮಹಾಭಾರತದಲ್ಲಿ ಧೃತರಾಷ್ಟ್ರನ ಹೆಂಡತಿ ಗಾಂಧಾರಿ ಮಾತ್ಸರ್ಯದ ಫಲವಾಗಿ ಪ್ರಸವಿಸಿದ ಮಾಂಸದ ಮುದ್ದೆ ನೂರಾರು ಚೂರುಗಳಾಗಿ ಒಡೆದುಹೋದ ಕಥೆ ನಿಮಗೆ ಗೊತ್ತೇ ಇದೆ. ಆ ಚೂರುಗಳನ್ನು ವೇದವ್ಯಾಸ ಮುನಿ ತುಪ್ಪದ ಮಡಕೆಗಳಲ್ಲಿ ಹಾಕಿಡುತ್ತಾನೆ. ಆ ಮಡಿಕೆಗಳಲ್ಲಿಯೇ

